627 (712) ಶ್ರೀ ಗೊಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೈಂದೂರು ವಿಶೇಷ ತಹಶೀಲ್ದಾರ್ ಕಛೇರಿಯು ಬಾಡಿಗೆ ಕಟ್ಟಡದಲ್ಲೇ ನಡೆಯುತ್ತಿರುವುದರಿಂದ ಸ್ವಂತ ಕಟ್ಟಡ ನಿರ್ಮಾಣ ಮಾಡುವ ವಿಚಾರವು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ;

ಇ) ವಿಶೇಷ ತಹಶೀಲ್ದಾರ್ ವ್ಯಾಪ್ತಿ ತೀರಾ ಹಿಂದುಳಿದ ಗುಡ್ಡಗಾಡು ಹಾಗೂ ನಕ್ಸಲೈಟ್ ಪ್ರದೇಶಗಳಿಂದ ಕೂಡಿದ್ದು, ಇವರ ಪ್ರಯಾಣಕ್ಕೆ ಅವಶ್ಯ ಸರ್ಕಾರಿ ವಾಹನ (ಜೀಪ್) ನೀಡುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇವರಿಗೆ ಯಾವಾಗ ವಾಹನವನ್ನು ನೀಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಜೀಪ್ ಖರೀದಿಸಲು ತಗಲುವ ವೆಚ್ಚಕ್ಕಾಗಿ ಅನುದಾನವನ್ನು ಆರ್ಥಿಕ ಇಲಾಖೆಯವರು ಒದಗಿಸಬೇಕಾಗಿದೆ. ಆರ್ಥಿಕ ಸಾಲದ 2006–07ನೇ ಆಯವ್ಯಯದ ಬಿಲ್ ಸದನದ ಅನುಮೋದನೆ ನಿರೀಕ್ಷೆಯಲ್ಲಿದೆ. ಅದನ್ನು ಒದಗಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

628 (1130) ಶ್ರೀ ಗೊಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾಗರದಲ್ಲಿರುವ ಮಿನಿ ವಿಧಾನಸೌಧವನ್ನು ದುರಸ್ತಿಗೊಳಿಸಲು ಮಂಜೂರಾದ ಹಣವೆಷ್ಟು;

ಆ) ಇದುವರೆವಿಗೂ ಖರ್ಚಾದ ಹಾಗೂ ಉಳಿದಿರುವ ಹಣವೆಷ್ಟು; ವಿವರ ನೀಡುವುದು.

ಇ) ಈ ಮಿನಿ ವಿಧಾನಸೌಧದ ಮೇಲೆ ಇನ್ನೊಂದು ಮಹಡಿ ಕಟ್ಟಡವನ್ನು ನಿರ್ಮಿಸಲು ಉದ್ದೇಶವಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು (ವಿವರ ಒದಗಿಸುವುದು)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ರೂ. 2.5 ಲಕ್ಷಗಳು.

ಆ) ಮಾರ್ಚ್ 2006ರವರೆಗೆ 1,88,679 ರೂ. ವೆಚ್ಚವಾಗಿದ್ದು ರೂ. 61,321 ಬಾಕಿ ಉಳಿದಿರುತ್ತವೆ.

ಇ) ಸದ್ಯಕ್ಕೆ ಈ ಪ್ರಸ್ತಾವನೆ ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

629 (1286) ಶ್ರೀ ಗೊಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ : 24–12–2005ರ ಸರ್ಕಾರದ ಸುತ್ತೋಲೆಯಲ್ಲಿ ಗೋಮಾಳ ಹಾಗೂ ಶಾಲೆಗಳಿಗೆ ಸೇರಿದ ಜಾಗಗಳ ಮಂಜೂರಾತಿಗೆ ನಿಷೇಧ ಹೇರಲಾಗಿದ್ದ ಸಾವಿರಾರು ಎಕರೆ ಜಮೀನಿನ ಮಂಜೂರಾತಿ ಪ್ರಕರಣಗಳು ಬಾಕಿ ಇರುವುದು ಗಮನಕ್ಕೆ ಬಂದಿದೆಯೇ;